ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಹಾಸನ ಜಿಲ್ಲೆಯಲ್ಲಿ ಜನವರಿ 2010ರ ಅಂತ್ಯಕ್ಕೆ ಒಟ್ಟು 903 ಹಾಲು ಉತ್ಪಾದಕರ ಸಂಘಗಳಿವೆ.

ಆ) ಅರಕಲಗೂಡು ಮತಕ್ಷೇತ್ರದಲ್ಲಿ ಜನವರಿ 2010ರ ಅಂತ್ಯಕ್ಕೆ ಒಟ್ಟು 101 ಹಾಲು ಉತ್ಪಾದಕರ ಸಂಘಗಳಿವೆ.

ಇ) ಇದೆ. 2009–10ನೇ ಸಾಲಿನಲ್ಲಿ ಅರಕಲಗೂಡು ಕ್ಷೇತ್ರದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಹೊಸದಾಗಿ 13 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರಾರಂಭಿಸಲಾಗಿದೆ;

1) ನರಸಿನಕುಪ್ಪೆ, 2) ಹೆಬ್ಬಾಳೆ, 3) ಶಿಣವಿನಕುಪ್ಪೆ, 4) ಮುತ್ತಿಗೆ, 5) ಕೊಳ್ಳಂಗಿ, 6) ಹೊಳಲಗೋಡು, 7) ಬಿಸಲೇನಹಳ್ಳಿ, 8) ಹೊನಗನಹಳ್ಳಿ, 9) ಕಾಳೇನಹಳ್ಳಿ, 10) ಆನಂದೂರು, 11) ವಡ್ಡರಹಳ್ಳಿ, 12) ಹನಿಹಾಳ್, 13) ಕೇರಳಾಪುರ.

ಈ) 2010–11ನೇ ಸಾಲಿನಲ್ಲಿ ಹಾಸನದ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಹೊಸದಾಗಿ 100 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಪ್ರಾರಂಭಿಸುವ ಉದ್ದೇಶವಿರುತ್ತದೆ.

308 (704) ಶ್ರೀ ಮಂಜುನಾಥ್ ಹೆಚ್.ಪಿ (ಹುಣಸೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಸಂಶೋಧನೆ ಮತ್ತು ಮೌಲ್ಯಮಾಪನ ಮಧ್ಯ ಪ್ರವೇಶಿಕೆಯಡಿ "ಕಲಿಕಾ ಯತ್ನ" ಎಂಬ ನೂತನ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಸರ್ಕಾರಿ ಶಾಲೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಾರ್ಯಕ್ರಮ ಅನುಷ್ಠಾನಕ್ಕಾಗಿ ಪ್ರಜಾ ಯತ್ನ ಎಂಬ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆ (ಎನ್.ಜಿ.ಓ)ಗೆ ಕಾರ್ಯಭಾರ ವಹಿಸಲಾಗಿದ್ದು, ಈ ಸಂಸ್ಥೆಗೆ ಯಾವ ಆಧಾರದ ಮೇಲೆ ಕಾರ್ಯ ವಹಿಸಲಾಗಿದೆ;

ಇ) ಕಲಿಕಾ ಯತ್ನ ಕಾರ್ಯಕ್ರಮವನ್ನು ರಾಜ್ಯದಲ್ಲಿ ಯಾವ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ;

ಈ) ಅನುಷ್ಠಾನಕ್ಕಾಗಿ ಸದರಿ ಸಂಸ್ಥೆಗೆ 2005–06ನೇ ಸಾಲಿನಿಂದಲೂ ಈವರೆವಿಗೂ ಪಾವತಿಸಿರುವ ಹಣವೆಷ್ಟು ಮತ್ತು ಯಾವ ಬಾಬ್ತು ನೀಡಲಾಗಿದೆ;

ಉ) ಕಾರ್ಯಕ್ರಮ ಅನುಷ್ಠಾನ ರೀತಿಯ ಲೋಪದೋಷಗಳಿಂದ ಕೂಡಿದ್ದು, ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದು ಈ ಸಂಸ್ಥೆಯ ಶಿಕ್ಷಕರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದು ಕಲಿಕಾ ಯತ್ನ ಕಾರ್ಯಕ್ರಮ ಅನುಷ್ಠಾನವನ್ನು ರದ್ದುಗೊಳಿಸಿ ಎಂದಿನಂತೆ ಕಲಿ ನಲಿ ಪಠ್ಯಕ್ರಮದ ಮುಖಾಂತರ ಶಿಕ್ಷಣ ನೀಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ;

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಪ್ರಜಾಯತ್ನ ಸಂಸ್ಥೆ 2005–06 ರಿಂದ 2007–08ರವರೆಗೆ ಕಲಿಕಾಯತ್ನ ಕಾರ್ಯಕ್ರಮ ಅನುಷ್ಠಾನಗೊಳಿಸಲು ಸಲ್ಲಿಸಿದ್ದ ಪ್ರಸ್ತಾವನೆಯನ್ನು ದಿನಾಂಕ: 05–08–2005ರಂದು ನಡೆದ ಸರ್ವ ಶಿಕ್ಷಣ ಅಭಿಯಾನ ಯೋಜನೆಯ ರಾಜ್ಯ ಸಂಶೋಧನಾ ಸಲಹಾ ಸಮಿತಿ (ಎಸ್.ಆರ್.ಎ.ಸಿ.) ಸಭೆಯಲ್ಲಿ ಚರ್ಚಿಸಿ 2005–06 ರಿಂದ 2007–08ನೇ ಸಾಲಿಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ನಿರ್ಣಯಿಸಲಾಯಿತು.

2008–09 ನೇ ಸಾಲಿಗೆ ಪ್ರಜಾಯತ್ನ ಸಂಸ್ಥೆಗೆ ಕಲಿಕಾಯತ್ನ ಕಾರ್ಯಕ್ರಮವನ್ನು ಮುಂದುವರೆಸಲು ದಿನಾಂಕ: 25–08–2008 ರ ಸರ್ವ ಶಿಕ್ಷಣ ಅಭಿಯಾನ 22ನೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಇದರನ್ವಯ ದಿನಾಂಕ: 19–08–2008ರಂದು ರಾಜ್ಯ ಯೋಜನಾ ನಿರ್ದೇಶಕರು ಮತ್ತು ಪ್ರಜಾಯತ್ನ ಸಂಸ್ಥೆಯ ರಾಜ್ಯ ಕಾರ್ಯಕ್ರಮ ಸಮನ್ವಯಾಧಿಕಾರಿಗಳೊಂದಿಗೆ 2008–10ರವರೆಗೆ ಈ ಕಾರ್ಯಕ್ರಮವನ್ನು ಹುಣಸೂರು ಬ್ಲಾಕ್‌ನ 14 ಕ್ಲಸ್ಟರ್‌ಗಳಲ್ಲಿ ಅನುಷ್ಠಾನ ಗೊಳಿಸಲು ಒಡಂಬಡಿಕೆಯಾಗಿದೆ.

ಇ) ಕಲಿಕಾಯತ್ನ ಕಾರ್ಯಕ್ರಮವನ್ನು ರಾಜ್ಯದಲ್ಲಿ ಪ್ರಾಯೋಗಿಕವಾಗಿ ಹುಣಸೂರು ಬ್ಲಾಕಿನ ಬಿಳಿಕೆರೆ ಕ್ಲಸ್ಟರ್‌ನಲ್ಲಿ ಜಾರಿಗೆ ತರಲಾಗಿದೆ.

ಈ) ಒಟ್ಟು 335 ಶಾಲೆಗಳಲ್ಲಿ ಕಲಿಕಾಯತ್ನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಪ್ರಜಾಯತ್ನ ಸಂಸ್ಥೆಗೆ 2005–06ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು ರೂ. 25,53,677/– (ರೂ. ಇಪ್ಪತ್ತೈದು ಲಕ್ಷದ ಐವತ್ತಮೂರು ಸಾವಿರದ ಆರುನೂರ ಎಪ್ಪತ್ತೇಳು) ಗಳನ್ನು ಪಾವತಿಸಲಾಗಿದೆ.

ಉ) ಕಲಿಕಾಯತ್ನ ಕಾರ್ಯಕ್ರಮದ ಲೋಪದೋಷಗಳ ಬಗ್ಗೆ ಇಲ್ಲಿಯವರೆಗೆ ಯಾವುದೇ ದೂರು ಸರ್ವ ಶಿಕ್ಷಣ ಅಭಿಯಾನ ಕಛೇರಿಯಲ್ಲಿ ದಾಖಲಾಗಿರುವುದಿಲ್ಲ. ಹಾಗೂ 2009–10ನೇ ಸಾಲಿಗೆ ಕಲಿಕಾಯತ್ನ ಕಾರ್ಯಕ್ರಮ ಪೂರ್ಣಗೊಳ್ಳಲಿದ್ದು, 2010–11ನೇ ಸಾಲಿಗೆ ಸದರಿ ಕಾರ್ಯಕ್ರಮವನ್ನು ಮುಂದುವರೆಸುವ ಬಗ್ಗೆ ಸರ್ವ ಶಿಕ್ಷಣ ಅಭಿಯಾನದಲ್ಲಿ ಚರ್ಚಿಸಿ ಕ್ರಮ ಜರುಗಿಸಲಾಗುವುದು.

ಹುಣಸೂರಿಗೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣದ ಬಗ್ಗೆ

310 (706) ಶ್ರೀ ಹೆಚ್.ಪಿ.ಮಂಜುನಾಥ್ (ಹುಣಸೂರು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು ಹುಣಸೂರಿಗೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಎಂದಿನಿಂದ ಮಂಜೂರಾಗಿರುತ್ತದೆ;

ಆ) ಸದರಿ ಕಾಲೇಜಿನಲ್ಲಿ ಕಟ್ಟಡದ ಅಭಾವದಿಂದ ಮಕ್ಕಳ ಉಪನ್ಯಾಸಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದ ವತಿಯಿಂದ ಯಾವುದಾದರೂ ಅನುದಾನ ಮಂಜೂರಾಗಿರುವುದೇ;

ಈ) ಹಾಗಿದ್ದಲ್ಲಿ, ಮಂಜೂರಾಗಿರುವ ಅನುದಾನವೆಷ್ಟು, ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು;

ಉ) ಹಾಲಿ ಕಟ್ಟಡ ಕಟ್ಟಲು ಸ್ಥಳವಿದ್ದರೂ ಸಹ ಸರಿಯಾದ ಕಟ್ಟಡವಿಲ್ಲದೆ ಮರದ ನೆರಳಿನಲ್ಲಿ ಪಾಠ ಪ್ರವಚನಗಳು ನಡೆಯುತ್ತಿದ್ದು, ದುಸ್ಥಿತಿಯನ್ನು ಹೋಗಲಾಡಿಸಲು ಸರ್ಕಾರ ಕೈಗೊಳ್ಳಲಾಗುವ ಕ್ರಮಗಳೇನು (ವಿವರ ನೀಡುವುದು);

ಊ) ಈ ಕ್ರಮದ ಬಗ್ಗೆ ವಿವರ ನೀಡುವುದು?